ಕೃಷಿ ಇಲಾಖೆಗೆ ವಿಶ್ವಬ್ಯಾಂಕ್ ನೆರವಿನ ಯೋಜನೆಯಿಂದ ಬಂದ ಹಣ

608 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94, 1994-95, 1995-96, 1996-97, 1997-98ನೇ ಸಾಲಿನಲ್ಲಿ ರಾಜ್ಯ ಕೃಷಿ ಇಲಾಖೆಗೆ ವಿಶ್ವ ಬ್ಯಾಂಕ್ ನೆರವಿನ ಯೋಜನೆಯಡಿಯಲ್ಲಿ ಬಂದ ಹಣವೆಷ್ಟು? ಇದರಲ್ಲಿ ಎಷ್ಟು ಹಣವನ್ನು ವಿವಿಧ ಕಾಮಗಾರಿಗಳಿಗಾಗಿ ಖರ್ಚು ಮಾಡಲಾಗಿದೆ (ಕಾಮಗಾರಿಗಳ ವಿವರ ನೀಡುವುದು)?*

ಆ) *ಈ ಕಾಮಗಾರಿಗಳಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಅವ್ಯವಹಾರದ ಮೊತ್ತವೆಷ್ಟು ಇದಕ್ಕೆ ಕಾರಣರಾದವರು ಯಾರು? ಇವರ ವಿರುದ್ಧ ಸರ್ಕಾರದ ಯಾವ ಕ್ರಮ ಕೈಗೊಂಡಿದೆ?*

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) :

ಅ) 1993-94ನೇ ಸಾಲಿನಲ್ಲಿ ವಿಶ್ವಬ್ಯಾಂಕ್ ಯೋಜನೆಗಳಿಗೋಸ್ಕರ ರಾಜ್ಯ ಜಲಾನಯನ ಅಭಿವೃದ್ಧಿ ಯೋಜನೆಗಳಿಗಾಗಿ 1197.00 ಲಕ್ಷ ರೂ.ಗಳನ್ನು ಒದಗಿಸಲಾಗಿತ್ತು. ಇದರಲ್ಲಿ ಒಟ್ಟು 1196.399 ಲಕ್ಷ ರೂ.ಗಳು ಖರ್ಚಾಗಿರುತ್ತದೆ. ಈ ಪೈಕಿ986.552 ಲಕ್ಷ ರೂ. ಕಾಮಗಾರಿಗಳಿಗಾಗಿಯೂ ಹಾಗೂ 209.847 ಲಕ್ಷ ರೂ. ಗಳು ಸಿಬ್ಬಂದಿ ವೆಚ್ಚಕ್ಕಾಗಿ ಖರ್ಚಾಗಿದೆ.

ವಿವರಗಳು :

ಅ)	ಕಲ್ಯಾಣಕೆರೆ ಮಾವತ್ತೂರು ಕೆರೆ, ನೆಲಮಂಗಲ ಕಾಮಗಾರಿಗಾಗಿ	428.993
	ಸಿಬ್ಬಂದಿ ವೆಚ್ಚಕ್ಕಾಗಿ	90.882
		ಒಟ್ಟು : 519.875
ಆ)	4 ಹೊಸ ವಿಶ್ವಬ್ಯಾಂಕ್ ನೆರವು ಯೋಜನೆಗಳು	
	ಕಾಮಗಾರಿಗಾಗಿ	557.559
	ಸಿಬ್ಬಂದಿ ವೆಚ್ಚಕ್ಕಾಗಿ	118.965
		ಒಟ್ಟು : 676.524

ಭೌತಿಕ ಸಾಧನೆ

	ಯೋಜನೆಗಳು	ಕೃಷಿ	ಅರಣ್ಯ	ತೋಟಗಾರಿಕೆ	ಸಂಗ್ರಹಣ ವಿಧಾನ ಸಂಖ್ಯೆ
1)	ಕಲ್ಯಾಣಕೆರೆ ಹೊರತ್ತೂರುಕೆರೆ	9672	2103	840	324
2)	4 ಹೊಸ ವಿಶ್ವಬ್ಯಾಂಕ್ ಯೋಜನೆಗಳು	8683	535	968	541
	ಒಟ್ಟು	**18355**	**2638**	**1808**	**865**

ವಿಶ್ವಬ್ಯಾಂಕ್ ನೆರವು 1993-94ಕ್ಕೆ ಅಂತ್ಯಗೊಂಡಿರುತ್ತದೆ.

ಆ) ಕಾಮಗಾರಿಗಳ ಅವ್ಯವಹಾರದ ಬಗ್ಗೆ ಯಾವ ವಿಷಯವು ಈ ಕಛೇರಿಯ ಗಮನಕ್ಕೆ ಬಂದಿರುವುದಿಲ್ಲ.

ಬಾದಾಮಿಯ ಕೊಳಚೆ ಪ್ರದೇಶಗಳ ಕಾಮಗಾರಿ

611 - ಶ್ರೀ ಬಿ.ವಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಾದಾಮಿ ಪಟ್ಟಣದ ಪುರಸಭೆ ಹದ್ದಿನಲ್ಲಿ ಕರ್ನಾಟಕ ಕೊಳಚೆ ಮಂಡಳಿಯಿಂದ ಮೂಲಭೂತ ಸೌಕರ್ಯಕ್ಕಾಗಿ ಎಷ್ಟು ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಲಾಗಿದೆ ಹಾಗೂ ಕಾಮಗಾರಿ ಕೈಗೆತ್ತಿಕೊಂಡಿದೆ.

ಆ) ಐತಿಹಾಸಿಕ ಬಾದಾಮಿ ಪಟ್ಟಣಕ್ಕೆ ಮೂರು ವರ್ಷದಿಂದ ಪ್ರಯತ್ನಿಸಿದ್ದರೂ ಕರ್ನಾಟಕ ಕೊಳಚೆ ಮಂಡಳಿಯವರು ಯಾವುದೇ ಕಾಮಗಾರಿ ಕೈಗೆತ್ತಿಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ 1998-99ಕ್ಕೆ ಬಾದಾಮಿ ಪಟ್ಟಣಕ್ಕೆ ವಿಶೇಷವಾಗಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಹಾಗೂ ಎಷ್ಟು ಹಣ ಬಿಡುಗಡೆ ಮಾಡಲಾಗುವುದು ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಬಾದಾಮಿ ಪಟ್ಟಣದ ಪುರಸಭೆಯ ವ್ಯಾಪ್ತಿಯಲ್ಲಿನ 10 ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಗುರುತಿಸಿದ್ದು ಇವುಗಳನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಾಯಿದೆ ಅಡಿಯಲ್ಲಿ ಈ ಪ್ರದೇಶಗಳು ಘೋಷಣೆಯಾದ ನಂತರ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.